# 4. ಶೈಕ್ಷಣಿಕ ವಾರ್ಷಿಕ ಮಾರ್ಗಸೂಚಿ 2023–24

2023–24ನೇ ಸಾಲಿನ ಶೈಕ್ಷಣಿಕ ಪ್ರಗತಿ ಯಶಸ್ವಿಗೊಳಿಸಲು ಪರಿಣಾಮಕಾರಿ ಬೋಧನಾ ಕಲಿಕಾ ಪ್ರಕ್ರಿಯೆ ಅತ್ಯವಶ್ಯಕ. ಇದಕ್ಕಾಗಿ ಉತ್ತಮ ಪೂರ್ವ ಯೋಜಿತ ತಯಾರಿ ಮುಖ್ಯವಾಗುತ್ತದೆ.

ಮಗುವಿನ ಸರ್ವತೋಮುಖ ಬೆಳವಣಿಗೆಗೆ ಶಾಲೆ ಒಂದು ಪರಿಣಾಮಕಾರಿ ವೇದಿಕೆ. ಪ್ರಯುಕ್ತ ಮಗುವಿನ ಪರಿಣಾಮಕಾರಿ ಕಲಿಕೆ ಗುಣಮಟ್ಟದಿಂದ ಕೂಡಿದ್ದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಪ್ರಯುಕ್ತ ರಾಜ್ಯದ ಎಲ್ಲಾ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಪ್ರಸ್ತುತ 2023–24 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಆಯೋಜಿಸುವುದರೊಂದಿಗೆ ವಾರ್ಷಿಕ ಪಠ್ಯವಸ್ತು ಬೋಧನೆ, ಸಹಪಠ್ಯ ಚಟುವಟಿಕೆಗಳು, ಮೌಲ್ಯಾಂಕನ ಕೈಗೊಳ್ಳಲು ಅನುವಾಗುವಂತೆ ಕೆಳಕಂಡ ಶೈಕ್ಷಣಿಕ ವಾರ್ಷಿಕ ಮಾರ್ಗಸೂಚಿ ತಯಾರಿಸಿದೆ.

ಸದರಿ ವಾರ್ಷಿಕ ಮಾರ್ಗಸೂಚಿಯು ವಾರ್ಷಿಕ/ಮಾಹೆವಾರು ಪಾಠ ಹಂಚಿಕೆ, ಸಹಪಠ್ಯ ಚಟುವಟಿಕೆಗಳು, ಪರೀಕ್ಷೆಗಳು ಮತ್ತು ಮೌಲ್ಯಂಕನ ವಿಶ್ಲೇಷಣೆ (ಸಿ.ಸಿ.ಇ)–ಗುಣಮಟ್ಟದ ಶಿಕ್ಷಣಕ್ಕಾಗಿ ಫಲಿತಾಂಶ ಮುಖಿ ಚಟುವಟಿಕೆಗಳು ಹಾಗೂ ವಿವಿದ ಶಾಲಾ ಹಂತದ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಹಾಯವಾಗುವಂತೆ ಮಾಹೆವಾರು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಹಂಚಿಕೆ ಮಾಡಿ ನಿಗಧಿಪಡಿಸಿದೆ. ಇದನ್ನು ಸಲಹಾತ್ಮಕವಾಗಿ ನೀಡಿದ್ದು ಸರ್ಕಾರ ಮತ್ತು ಇಲಾಖೆ ಕಾಲಕಾಲಕ್ಕೆ ನೀಡುವ ಆದೇಶಾನುಸಾರವಾಗಿ ಬದಲಾವಣೆ ಮಾಡುವ ಷರತ್ತಿಗೊಳಪಟ್ಟು ರೂಪಿಸಿದೆ. ಅದರಂತೆ ಜಿಲ್ಲೆ/ತಾಲ್ಲೂಕು/ಕ್ಲಸ್ಟರ್ ಹಾಗೂ ಶಾಲಾ ಹಂತದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು/ಶಿಕ್ಷಕ ವೃಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪೂರ್ವಭಾವಿಯಾಗಿ ಚರ್ಚಿಸಿ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮವಹಿಸಲು ಸೂಚಿಸಿದೆ.

**2023–24ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿಯ ಘೋಷ್ವಾರೆ**

| 2023–24ನೇ ಸಾಲು ತಿಂಗಳು | ಲಭ್ಯವಾಗುವ ಶಾಲಾ ಕರ್ತವ್ಯದ ದಿನಗಳು | ವಾರ್ಷಿಕ ಪಾಠ ಹಂಚಿಕೆ (ಶೇಕಡವಾರು ಪ್ರಮಾಣದಲ್ಲಿ) | | ಸಿ.ಸಿ.ಇ ಅಡಿ ಚಟುವಟಿಕೆಗಳು ಪರೀಕ್ಷೆಗಳು ಮತ್ತು ಮೌಲ್ಯಾಂಕನ ವಿಶ್ಲೇಷಣೆ | ಸಹಪಠ್ಯ ಚಟುವಟಿಕೆಗಳು |
|---|---|---|---|---|---|
| | | **1,2,3& 4,6,7&9** ನೇ ತರಗತಿಗಳು | 5, 8 ಮತ್ತು 10ನೇ ತರಗತಿ | | |
| **ಮೇ–2023** | 03 | – | – | – | ಶಾಲಾ ಪೂರ್ವ ತಯಾರಿ, ದಾಖಲಾತಿ ಆಂದೋಲನ/ ಶಾಲಾ ಪ್ರಾರಂಭೋತ್ಸವ |
| **ಜೂನ್–2023** | 25 | 1–3ನೇ ತರಗತಿಗಳಿಗೆ ದಿನಾಂಕ: 01.06.2023 ರಿಂದ 30.06.2023 ರವರೆಗೆ ಸೇತುಬಂಧ ಶಿಕ್ಷಣ 25 ದಿನಗಳು ಹಾಗೂ ವಾರ್ಷಿಕ ಪಾಠ ಯೋಜನೆಯಡಿ ನಿಗಧಿಪಡಿಸಿದಂತೆ ಶೇ. 5 ರಷ್ಟು ಪಠ್ಯ ವಸ್ತು ಬೋಧನೆ ನಿರ್ವಹಿಸುವುದು | 15 ದಿನಗಳ ಸೇತುಬಂಧ ಶಿಕ್ಷಣ ಹಾಗೂ ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ 10% ಪಠ್ಯವಸ್ತು ಬೋಧನೆ | ಪುಸ್ತಕ ಪರಿಚಯ ಅವಧಿಗಳ ನಿರ್ವಹಣೆ, ಕಲಿಕಾ ಕೊರತೆ/ ಪ್ರಗತಿ ತಿಳಿಯಲು ಪೂರ್ವ ಪರೀಕ್ಷೆ ಸಾಫಲ್ಯ ಪರೀಕ್ಷೆ ನಿರ್ವಹಿಸಿ, ಪರಿಹಾರ ಬೋಧನೆ ನೀಡಿ ಹಿಂದಿನ ತರಗತಿ ಹಾಗೂ ಈಗಿನ ತರಗತಿ ಕಲಿಕೆಗೆ | ಶಾಲಾ ಹಂತದಲ್ಲಿ ವಿವಿಧ ಶೈಕ್ಷಣಿಕ ಕ್ಲಬ್‌ಗಳ ರಚನೆ/ಬೋಧನೋಪಕರಣ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾ ಹಾಗೂ ಇ-ಕಲಿಕಾ ಕೇಂದ್ರಗಳ ಸಬಲೀಕರಣಗೊಳಿಸುವುದು. |

| | | | | | |
|---|---|---|---|---|---|
| | | 4,6,7 & 9 ನೇ ತರಗತಿಗಳಿಗೆ ದಿನಾಂಕ: 01.06.2023 ರಿಂದ 15.06.2023 ರವರೆಗೆ ಸೇತುಬಂಧ ಶಿಕ್ಷಣ ಹಾಗೂ ನಂತರ ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ. 10 ಪಠ್ಯ ವಸ್ತು ಬೋಧನೆ ನಿರ್ವಹಿಸುವುದು | | ಸೇತುಬಂಧ ಗೊಳಿಸುವುದು. CCE ಚಟುವಟಿಕೆಗಳ ನಿರ್ವಹಣೆ. | |
| ಜುಲೈ–2023 | 25 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ. 15 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ. 15 ಪಠ್ಯ ವಸ್ತು ನಿರ್ವಹಣೆ | FA–1 ಪರೀಕ್ಷೆ CCE ಮೌಲ್ಯಾಂಕನ ಚಟುವಟಿಕೆಗಳು ಹಾಗೂ ಶಿಕ್ಷಕರಿಗೆ ವಿವಿಧ ತರಬೇತಿಗಳು | ಶಾಲಾ/ ಕ್ಲಸ್ಟರ್/ ಹೋಬಳಿ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಜ್ಞಾನಗೋಷ್ಠಿ, ವಿಜ್ಞಾನ ನಾಟಕ ತಾಯಂದಿರ ಸಭೆ ಹಾಗೂ ವಿದ್ಯಾರ್ಥಿಗಳ ಆಪ್ತಸಮಾಲೋಚನಾ ಸಭೆಗಳ ನಿರ್ವಹಣೆ |
| ಆಗಸ್ಟ್–2023 | 26 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ. 15 ಪಾಠ ವಸ್ತು ನಿರ್ವಹಣೆ | CCE ಚಟುವಟಿಕೆಗಳು ಹಾಗೂ ಶಿಕ್ಷಕರಿಗೆ ತರಬೇತಿಗಳು | ತಾಲ್ಲೂಕು ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಇತರೆ ಸ್ಪರ್ದೆಗಳು |
| ಸೆಪ್ಟಂಬರ್–2023 | 24 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ 1 ರಿಂದ 3ನೇ ತರಗತಿಗೆ ಶೇ 15ರಷ್ಟು ಹಾಗೂ 4,6,7,9ನೇ ತರಗತಿಗಳಿಗೆಶೇ 10 ಪಠ್ಯ ವಸ್ತು ನಿರ್ವಹಣೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ<br>ಶೇ 10 ಪಠ್ಯ ವಸ್ತು ನಿರ್ವಹಣೆ | FA-2 ಮೌಲ್ಯಾಂಕನ, CCE ಚಟುವಟಿಕೆಗಳು ಹಾಗೂ SA-1 ಮೌಲ್ಯಮಾಪನ | ಮೌಲ್ಯಾಂಕನಾ ವಿಶ್ಲೇಷಣೆ |
| ಆಕ್ಟೋಬರ್–2023 | 11 | SA-1 ಮೌಲ್ಯಮಾಪನ ನಿರ್ವಹಣೆ<br>ಪುನರಾವರ್ತನೆ | SA-1 ಮೌಲ್ಯಮಾಪನ ನಿರ್ವಹಣೆ | SA-1 ಮೌಲ್ಯಮಾಪನ ನಿರ್ವಹಣೆ | ಜಿಲ್ಲಾ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ದಿ:08.10.2023ರಿಂದ 24.10.2023ರ ವರಗೆ ದಸರಾ ರಜೆ ಸಮುದಾಯದತ್ತಶಾಲೆ |
| ನವಂಬರ್–2023 | 23 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ | CCE ಚಟುವಟಿಕೆ | ವಿಭಾಗ/ರಾಜ್ಯ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, |

| | | | | | |
|---|---|---|---|---|---|
| | | 15 ಪಠ್ಯ ವಸ್ತು ನಿರ್ವಹಣೆ | ಶೇ 20 ಪಾಠ ವಸ್ತು ನಿರ್ವಹಣೆ | | ಶಾಲೆ/ಕ್ಲಸ್ಟರ್ ಹಾಗೂ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಯುವ ಸಂಸತ್ ಕಾರ್ಯಕ್ರಮ |
| ಡಿಸೆಂಬರ್–2023 | 25 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ<br>ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 1–3ನೇ ತರಗತಿಗಳಿಗೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 20 ಪಾಠ ವಸ್ತು ನಿರ್ವಹಣೆ | FA-3 ಮೌಲ್ಯಾಂಕನ, CCE ಚಟುವಟಿಕೆಗಳು | ರಾಜ್ಯ ಮಟ್ಟದ ಕ್ರೀಡಾಕೂಟ/ ಚಿತ್ರಕಲಾ ಸ್ಪರ್ಧೆ, ವೃತ್ತಿ ಶಿಕ್ಷಣ ಕಲಿಕೋತ್ಸವ, ವಿಚಾರಗೋಷ್ಠಿ, ಹಾಗೂ ಜಿಲ್ಲಾ/ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಯುವ ಸಂಸತ್ ಕಾರ್ಯಕ್ರಮ |
| ಜನವರಿ–2024 | 24 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 15 ಪಠ್ಯ ವಸ್ತು ನಿರ್ವಹಣೆ<br>ಶೇ 15 1–3ನೇ ತರಗತಿಗಳಿಗೆ | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 10 ಪಾಠ ವಸ್ತು ನಿರ್ವಹಣೆ | CCE ಚಟುವಟಿಕೆ | ತಾಯಂದಿರ ಸಭೆ ಹಾಗೂ ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆ |
| ಫೆಬ್ರವರಿ–2024 | 23 | ವಾರ್ಷಿಕ ಪಾಠಯೋಜನೆಯಡಿ ನಿಗಧಿಪಡಿಸಿದಂತೆ ಶೇ 5 ಪಠ್ಯವಸ್ತು ಬೋಧನೆ ಪುನರಾವರ್ತನಾ ತರಗತಿಗಳ ನಿರ್ವಹಣೆ | ಪುನರಾವರ್ತನಾ ತರಗತಿಗಳ ನಿರ್ವಹಣೆ | FA-4 CCE ಚಟುವಟಿಕೆ ಪ್ರಿಪರೇಟರಿ ಪರೀಕ್ಷೆ | ಫಲಿತಾಂಶ ಮುಖಿ ಕಾರ್ಯಕ್ರಮಗಳ ಆಯೋಜನೆ ಮತ್ತು ಅನುಪಾಲನೆ |
| ಮಾರ್ಚ್–2024 | 26 | ಪುನರಾವರ್ತನೆ, SA-2 ಪರೀಕ್ಷೆ ಮೌಲ್ಯಮಾಪನಾ ವಿಶ್ಲೇಷಣೆ | ಪುನರಾವರ್ತನೆಗಳು 5 ಮತ್ತು 8ಕ್ಕೆ ಮೌಲ್ಯಾಂಕನ ಮತ್ತು ಮೌಲ್ಯಮಾಪನಾ ವಿಶ್ಲೇಷಣೆ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಿರ್ವಹಣೆ | – | SA-2 ಪರೀಕ್ಷೆಗಳು ಮೌಲ್ಯಮಾಪನ ನಿರ್ವಹಣೆ ವಾರ್ಷಿಕ ಪರೀಕ್ಷೆಗಳ ನಿರ್ವಹಣೆ ಮೌಲ್ಯಮಾಪನಾ ಕಾರ್ಯ ಮತ್ತು ವಿಶ್ಲೇಷಣೆ |
| ಏಪ್ರಿಲ್–2024 | 9 | ಮೌಲ್ಯ ಮಾಪನ ಕಾರ್ಯ | ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಿರ್ವಹಣೆ ಮತ್ತು ಮೌಲ್ಯಮಾಪನಾ ಕಾರ್ಯ | ಮೌಲ್ಯ ಮಾಪನಾ ಕಾರ್ಯ | ಸಮುದಾಯದತ್ತ ಶಾಲೆ ಕಾರ್ಯಕ್ರಮ ಹಾಗೂ ಫಲಿತಾಂಶ ಪ್ರಕಟಣೆ |
| ಒಟ್ಟು | 244 | | | | |